

## ಸುಂದರ 'ಸರಳ' ಜಲಪಾತ

ಶಿವಮೊಗ್ಗ ಜಿಲ್ಲೆಯ ಸಾಗರದಿಂದ ಭಟ್ಕಳಕ್ಕೆ ಸಾಗುವ ಕೋಗಾರು ರಸ್ತೆಯಲ್ಲಿ 65 ಕಿ.ಮೀ. ದೂರದಲ್ಲಿ ಸಿಗುವ ಭೀಮೇಶ್ವರ ಬೋರ್ಡ್‌ಗಲ್ಲಿನಿಂದ 2 ಕಿ.ಮೀ. ಕಾಡಿನ ಮಧ್ಯೆ ಸಾಗಿದರೆ ಪ್ರಾಚೀನ ಕಾಲದ ಭೀಮ ಲಿಂಗೇಶ್ವರ ದೇವಾಲಯ ಸಿಗುತ್ತದೆ. ಈ ದೇವಾಲಯಕ್ಕೆ ಅಂಟಿಕೊಂಡಿರುವ ಬಂಡೆಗಳ ಸಂಧಿನಿಂದ, ಸುಮಾರು 300 ಅಡಿ ಎತ್ತರದಿಂದ 'ಸರಳ ಹೊಳೆ' ಜಲಪಾತವಾಗಿ ಧುಮ್ಮಿಕ್ಕುವುದನ್ನು ನೋಡುವುದೇ ಕಣ್ಣಿಗೊಂದು ಹಬ್ಬ.

ಈ ಜಾಗಕ್ಕೆ ಪೌರಾಣಿಕ ಹಿನ್ನೆಲೆಯೂ ಇದೆ. ವನವಾಸದಲ್ಲಿದ್ದಾಗ ಪೂಜಾ ಅಭಿಷೇಕಕ್ಕೆಂದು ಧರ್ಮರಾಯನಿಗೆ ಅರ್ಜುನ ಇಲ್ಲಿನ ಸರಳಿನಿಂದ ಜಲೋದ್ಭವಗೊಳಿಸಿದನಂತೆ. ದೇವಾಲಯದ ಹಿಂಭಾಗದಲ್ಲಿ ಹಿಡಿಂಬ ವನವಿದ್ದು, ಭೀಮ ಹಿಡಿಂಬಾಸುರನನ್ನು ವಧಿಸಿದ ಸ್ಥಳವೆಂಬುದು ಇಲ್ಲಿನ ಐತಿಹ್ಯ. ದೇವಾಲಯ 8–9ನೇ ಶತಮಾನದಲ್ಲಿ ವೈಭವದ ಶೃಂಗದಲ್ಲಿತ್ತೆಂದು ಅಂದಾಜು. ದಟ್ಟ ಕಾನನದಲ್ಲಿ ಬಂಡೆಗಳ ನಡುವಿನ ಈ ಜಲಧಾರೆ ಬಹು ಆಕರ್ಷಕ. ಮಳೆಗಾಲದಲ್ಲಿ ಭಾರಿ ಪ್ರಮಾಣದಲ್ಲಿ ಬೀಳುವ ನೀರಿನ ಭೋರ್ಗರೆತ, ಬಂಡೆಗಳ ಮೇಲೆ ಕುಳಿತು ಮೇಲಿನಿಂದ ಬೀಳುವ ನೀರಿಗೆ ತಲೆವೊಡ್ಡಿ ಆನಂದ ಅನುಭವಿಸಬಹುದು. ಎಚ್ಚರಿಕೆಯೂ ಅಗತ್ಯ. ಜೋಗ್ ಫಾಲ್ಸ್‌ನಿಂದ ಸುಮಾರು 35 ಕಿಲೋ ಮೀಟರ್ ದೂರದಲ್ಲಿ ಈ ಜಲಪಾತವಿದೆ.

–ಜಯಪ್ರಕಾಶ ತಲವಾಟ, ಸಾಗರ

## ತಾಳೆಗರಿ ಮೇಲೆ ಜಾತಕ

ಮಗು ಹುಟ್ಟಿದ ಬಳಿಕ ಜಾತಕ ಮಾಡಿಸುವುದು ಹಳೆಯ ಕಾಲದಿಂದ ಬಂದ ಪದ್ಧತಿ. ಈಗ ಕಂಪ್ಯೂಟರ್ ಮೂಲಕ ಕೆಲ ನಿಮಿಷಗಳಲ್ಲಿ ಜಾತಕ ಕೈಗೆ ಸಿಗಬಲ್ಲದು. ಆದರೆ 70–80 ವರ್ಷಗಳ ಹಿಂದೆ ಜಾತಕ ಬರೆಯುವುದು ದೊಡ್ಡ ಸಾಹಸವೇ ಆಗಿತ್ತು.



ಹಳೇ ಕಾಲದಲ್ಲಿ ತಾಳೆಗರಿಗಳ ಮೇಲೆ ನಾಜೂಕಾಗಿ ಗರಿಯನ್ನು ಕೊರೆದು ಜಾತಕವನ್ನು ಬರೆಯಲಾಗುತ್ತಿತ್ತು. ತಾಳೆಗರಿಗಳನ್ನು ಬಾಳೆಯ ನಾರಿನಿಂದ ಬಿಗಿಯಾಗಿ ಕಟ್ಟಲಾಗುತ್ತಿತ್ತು. ಕರಾವಳಿ ಭಾಗದ ಹಳೆ ಕಾಲದ ಮನೆಗಳಲ್ಲಿ ತಾಳೆಗರಿಯ ಮೇಲೆ ಚೂಪಾದ ಪೆನ್ನಿನಿಂದ ಕೊರೆದು ಬರೆದ ಜಾತಕಗಳು ಈಗಲೂ ಕಾಣಲು ಸಿಗುತ್ತವೆ. ತಾಳೆಗರಿಗಳ ಮೇಲೆ ಸುಂದರವಾಗಿ ಅಕ್ಷರಗಳನ್ನು ಬರೆಯುವುದು ನಿಜಕ್ಕೂ ಕಲಾತ್ಮಕತೆಯೇ ಸರಿ.

–ಅರುಣ್ ಕಿಲ್ಲೂರು



## ಪುದುಚೇರಿಯ ಮರಮನೆ

ದೊಡ್ಡದಿರಲಿ, ಸಣ್ಣದಿರಲಿ ಆಶ್ರಯಕ್ಕೊಂದು ಸೂರು ಎಲ್ಲರಿಗೂ ಬೇಕಾಗಿರುವ ಮೂಲ ಸೌಕರ್ಯ. ವಾಸಿಸಲು ಯೋಗ್ಯವಾಗಿರುವಂತಹ ಮನೆಯನ್ನು ನೆಲವನ್ನಾಧರಿಸಿ ಕಟ್ಟುತ್ತಾರೆ. ಎಲ್ಲಿಯೋ ಒಂದೆಡೆ ಮರಗಳಲ್ಲಿ ಮನೆಗಳನ್ನು ಕಟ್ಟಿ ಬದುಕುವ ಜನರ ಬಗ್ಗೆ ಓದಿದ್ದೆ. ಆದರೆ ಈ ಚಿತ್ರದಲ್ಲಿರುವುದು ವಾಸಿಸಲು ಕಟ್ಟಿದ ಮನೆಯಲ್ಲ. ಮರದ ಮೇಲೆ ಕಟ್ಟಿಗೆಯ ತೆಳ್ಳನೆಯ ಹಲಗೆಗಳಿಂದ ಸುಂದರವಾಗಿ ಕಟ್ಟಿದ ಈ ಮನೆಯಾಕೃತಿ ಇರುವುದು ಪುದುಚೇರಿಯ ಬೊಟಾನಿಕಲ್ ಗಾರ್ಡನ್‌ನಲ್ಲಿ.

ಮಳೆ, ಬಿಸಿಲು, ಗಾಳಿಗೆ ಕೆಡದೆ ಇರುವ ಇದರ ಮರ್ಮ ತಿಳಿಯದು. ಪ್ರವಾಸಿಗರನ್ನು ಆಕರ್ಷಿಸುತ್ತಿರುವ ಇದು ಫೋಟೋ ಕ್ಲಿಕ್ಕಿಸಿಕೊಳ್ಳಲು ಸೂಕ್ತ ಸ್ಥಳವಾಗಿದೆ.

–ಧರ್ಮಾನಂದ ಶಿರ್ವ, ಬೆಂಗಳೂರು



ಆಗಿದ್ದ ನಾನು ಇಂದು ಯಾರಿಗೂ ಬೇಡವಾದೆ. ನನ್ನ ಕೂಗು ಕೇಳಿದ ಎಲ್ಲರೂ 'ಎಲ್ಲೋ ಜಾತ್ರೆ ನಡೆಯುತ್ತಿರಬೇಕು' ಎಂದು ಊಹಿಸುತ್ತಿದ್ದ ಕಾಲದೊಂದಿಗಿನ ಸಂಬಂಧ ಕಳಚಿದೆ. ಇನ್ನೊಂದು ಗುಟ್ಟಿನ ವಿಷಯ ಹೇಳಲೇಬೇಕು. ಜಾತ್ರೆಯಲ್ಲಿ ಪ್ರಾಯದ ಪಡ್ಡೆ ಹುಡುಗರು ಹುಡುಗಿಯರ ಹಿಂಬಾಲಿಸಿ ನನ್ನನ್ನು ಕೂಗಿಸಿ ಪೊಲೀಸ್ ಅತಿಥಿಯಾದದ್ದೂ ಇದೆ. ಹುಡುಗಿಯರು ಕೂಡ ತಮ್ಮ ಪರಿಚಯದ ಹುಡುಗರ ಹಿಂದೆ ನನ್ನನ್ನು ಹಾಡಿಸಿ ಮಜಾ ತೆಗೆದುಕೊಂಡ ನೆನಪು ಈಗಲೂ ಹಸಿರಾಗಿದೆ. ಹೀಗೆ ನಂದೇ ಇದ್ದ 'ಹವಾ' ಈಗ ಕರ್ಕಶ ಧ್ವನಿ ಹೊರಡಿಸುವ ಪೀಪಿಗಳ ಪಾಲಾಗಿದೆ.

ಈಚೆಗೆ ಕೈಗೆ ಸಿಕ್ಕ ಚಿತ್ರದಲ್ಲಿನ ಈ ಆಟಿಕೆಯು ನನ್ನ ಬಾಲ್ಯದ ನೆನಪುಗಳನ್ನು ಒಮ್ಮೆಗೆ ತಿರುವಿಹಾಕಿದ್ದು ಹೀಗೆ...

–ನವ್ಯ ಶಿವದೇವ ಮೊಗಟಾ, ನವದೆಹಲಿ